ವಿಕ್ರಮ
50 ವರ್ಷಗಳ ಹಿಂದೆ
25-05-1967

# ಕಾಶ್ಮೀರದಲ್ಲಿ ಸ್ಫೋಟಕ ಪರಿಸ್ಥಿತಿ !

## ಶೇಖರ ಪತ್ರ ಪಾಕಿಸ್ತಾನಕ್ಕೆ ಹೇಗೆ ತಲುಪಿತು ?

ದಿಲ್ಲಿ: ಕಾಶ್ಮೀರವನ್ನು ಆಕ್ರಮಿಸಲು ಪಾಕಿಸ್ತಾನ ಪೂರ್ಣ ಸಿದ್ಧತೆ ನಡೆಸಿದೆ. ಈ ವಾರ ಅಖನೂರ್ ಗಡಿಯಲ್ಲಿ ಗುಂಡು ಹಾರಿಸಿ ಪಾಕ್ ಸೈನಿಕರು ಭಾರತಕ್ಕೆ ಅದರ ಸೂಚನೆಯನ್ನು ನೀಡಿರುವಾಗ ಇಲ್ಲಿ ಶೇಖ್ ಅಬ್ದುಲ್ಲರ ಬಿಡುಗಡೆಯ ಮಾತು ಕೇಳಿಬರುತ್ತಿರುವುದರ ಬಗ್ಗೆ ಹಾಗೂ ಕೊಡೈಕೆನಾಲ್‌ನಲ್ಲಿ ಬಂಧನದಲ್ಲಿರುವ ಶೇಖರು ಬರೆದಿರುವರೆನ್ನಲಾದ ಪತ್ರವೊಂದು ಪಾಕಿಸ್ತಾನದ 'ಡಾನ್' ಪತ್ರಿಕೆಯಲ್ಲಿ ಪ್ರಕಟವಾಗಿರುವ ಬಗ್ಗೆ ಇಲ್ಲಿಯ ರಾಜಕೀಯ ವಲಯಗಳಲ್ಲಿ ಆಶ್ಚರ್ಯ ವ್ಯಕ್ತಪಡಿಸಲಾಗುತ್ತಿದೆ.

- ಕಳೆದ ವಾರ ಕಾಶ್ಮೀರಕ್ಕೆ ಸಂದರ್ಶನವಿತ್ತ ಪ್ರಧಾನಿ ಇಂದಿರಾಜಿ ಅದನ್ನು 'ಕೇವಲ ಖಾಸಗಿ' ಎಂದು ಕರೆದಿದ್ದರೂ ಅಲ್ಲಿಯ ಸ್ಫೋಟಕ ಪರಿಸ್ಥಿತಿಯ ಬಗ್ಗೆ ಪ್ರತ್ಯಕ್ಷ ಪರಿಶೀಲನೆ ನಡೆಸಲು ಅವರು ಹೋಗಿದ್ದರೆಂದು ಹೇಳಲಾಗಿದೆ. ಕಾಶ್ಮೀರದೊಳಗೆ ಶೇಖ್ ಅಬ್ದುಲ್ಲಾ ಪರ 'ಪ್ಲೆಬಿಸೈಟ್ ಫ್ರಂಟ್' ಚಟುವಟಿಕೆಗಳು ತೀವ್ರಗೊಳ್ಳುತ್ತಿರುವಂತೆ ಪಾಕಿಸ್ತಾನಿ ಸೈನಿಕರು ಗಡಿಗಳಲ್ಲಿ ಆಕ್ರಮಣಕ್ಕೆ ಸಿದ್ಧರಾಗಿ ನಿಂತಿದ್ದಾರೆ. ಕಾಶ್ಮೀರದ ಒಳಗೆ ಬಂಡಾಯ ಮತ್ತು ವಿಧ್ವಂಸಕ ಕೃತ್ಯಗಳನ್ನು ನಡೆಸುವ ಕೇಂದ್ರಗಳನ್ನು ಹಾಜಿಪೀರ್ ಕ್ಷೇತ್ರದಲ್ಲಿ ತೆರೆಯಲಾಗಿದ್ದು ಹಿಲ್ಲಾನ್‌ನಲ್ಲಿರುವ ಕೇಂದ್ರಗಳು ತುಂಬ ಚಟುವಟಿಕೆ ನಡೆಸುತ್ತಿವೆ ಎಂದು ವರದಿಯಾಗಿದೆ. ಈ ಕೇಂದ್ರಗಳಿಗೆ ಅಧ್ಯಕ್ಷ ಅಯೂಬರು ಕಮ್ಯೂನಿಸ್ಟ್ ಚೀನಾದ ಗೆರಿಲ್ಲಾ ಯುದ್ಧ ತಜ್ಞರೊಂದಿಗೆ ಇತ್ತೀಚೆಗೆ ಭೇಟಿ ಕೊಟ್ಟಿದ್ದರು.
- ಈ ವಾರವೇ ಅಕನೂರಿನಲ್ಲಿ ಪಾಕಿಸ್ತಾನಿ ಸೈನಿಕರು ಗುಂಡು ಹಾರಿಸಿದ ಘಟನೆ ಭಾರತದ ಪ್ರತಿಕ್ರಿಯೆಯ ಪ್ರಮಾಣವನ್ನು ತಿಳಿಯಲು ಉದ್ದೇಶಿಸಿ ನಡೆಸಿದ ಸೈನಿಕ ಚಟುವಟಟಿಕೆಯಾಗಿದ್ದು ಜಮ್ಮು ಮತ್ತು ಕಾಶ್ಮೀರ ಕಣಿವೆಯಲ್ಲಿ ಒಂದೇ ಕಾಲಕ್ಕೆ ಪಾಕ್ ಸೈನಿಕರು ನುಗ್ಗಬಹುದೆಂಬ ಭೀತಿ ಇದೆ.
- ಕಾಶ್ಮೀರದ ಪರಿಸ್ಥಿತಿ ಇಷ್ಟು ಸ್ಫೋಟಕವಾಗಿರುವಾಗ ಶೇಖ್ ಅಬ್ದುಲ್ಲರ ಬಿಡುಗಡೆಗೆ ಕೆಲವರು ಪ್ರಯತ್ನಿಸುತ್ತಿದ್ದು ಪ್ರಧಾನಿಯವರು ಈ ಬೇಡಿಕೆಗೆ ಒಪ್ಪಬಹುದೆಂಬ ಸುದ್ದಿ ಇಲ್ಲಿಯ ವಲಯಗಳಲ್ಲಿ ತೀವ್ರ ಪ್ರತಿಕ್ರಿಯೆಯನ್ನುಂಟು ಮಾಡಿದೆ.
- ಈ ಸುದ್ದಿ ಹರಡುತ್ತಿರುವಂತೆಯೇ ಶೇಖರು ಶ್ರೀ ಆರ್.ಎನ್.ವೈಷ್ಣವಿಯವರಿಗೆ ಬರೆದುದೆನ್ನಲಾಗಿರುವ ಪತ್ರವೊಂದನ್ನು ಕರಾಚಿಯ 'ಡಾನ್' ಪತ್ರಿಕೆ ಪ್ರಕಟಿಸಿದೆ. ಡಾನ್ ವರದಿಯಂತೆ ಅದರಲ್ಲಿ ಶೇಖರು 'ಯೋಗ್ಯ ಕಾಲಕ್ಕೆ ಮುಂಚಿತವಾಗಿ ಯಾವುದಕ್ಕೂ ಕೈಹಾಕದಿರಿ. ಎಲ್ಲವೂ ಸಕಾಲಕ್ಕೆ ಸರಿಯಾಗಿ ಬರುವುದು. ತಾಳ್ಮೆ, ದೃಢತೆ, ಉದ್ದೇಶ ಮತ್ತು ಆಸೆಯಿಂದ ಪ್ರಯತ್ನಿಸಿ' ಎಂದು ಸಂದೇಶ ನೀಡಿ 'ಕಾಶ್ಮೀರದಲ್ಲಿ ಈಗ ರಾಕ್ಷಸೀ ಕಾನೂನುಗಳು ಮತ್ತು ಸುಗ್ರೀವಾಜ್ಞೆ'ಗಳ ರಾಜ್ಯ ನಡೆದಿದೆ ಎಂದು ಆರೋಪಿಸಿದ್ದಾರೆ. ಕೊಡೈಕೆನಾಲ್‌ನಲ್ಲಿ ಬಂಧನದಲ್ಲಿರುವ ಶೇಖರು ಈ ಪತ್ರವನ್ನು ಹೇಗೆ ಹೊರಕಳುಹಿಸಿದರು ಮತ್ತು ಅದು ಪಾಕಿಸ್ತಾನಕ್ಕೆ ಹೇಗೆ ತಲುಪಿತೆಂಬುದರ ಬಗ್ಗೆ ಇಲ್ಲಿ ಆಶ್ಚರ್ಯವನ್ನು ವ್ಯಕ್ತಪಡಿಸಲಾಗುತ್ತಿದೆ.
- 'ಕಾಶ್ಮೀರ್ ಸಹಿತ' ಎಲ್ಲ ವಿಷಯಗಳನ್ನೂ ನಾವು ಚರ್ಚಿಸಲು ಸಿದ್ಧರಾಗಿದ್ದೇವೆಂಬ ಪ್ರಧಾನಿಯವರ ಹೇಳಿಕೆ ಮತ್ತು 'ವಿವಾದದ ವಿಷಯಗಳನ್ನು ತುರ್ತಾಗಿ ಚರ್ಚಿಸಲು' ಪಾಕ್ ವಿದೇಶಾಂಗ ಸಚಿವರಿಗೆ ಶ್ರೀ ಭಾಗ್ಲಾರವರ ಕಳಕಳಿಯ ಪತ್ರದ ಪ್ರಕರಣಗಳು 'ಕಾಶ್ಮೀರ್ ಕಣಿವೆಯನ್ನು ಕೈಬಿಡಲು ದಿಲ್ಲಿ ಸಿದ್ಧಗೊಳ್ಳುತ್ತಿದೆ' ಎಂಬ ಅನುಮಾನವನ್ನು ಹುಟ್ಟಿಸಿವೆ. ಈ ಬಗ್ಗೆ ಲೋಕಸಭೆಯಲ್ಲಿ ಸಾಕಷ್ಟು ಬಿಸಿ ಚರ್ಚೆ ನಡೆಯುವ ನಿರೀಕ್ಷೆ ಇದೆ.

ರಕ್ತ 'ದಾನ'!




(ಕೃಪೆ: ಹಿಂದುಸ್ತಾನ್ ಸ್ಟ್ಯಾಂಡರ್ಡ್)